



ಪೂರಕಚಿತ್ರ: ಕನ್ನಡದ 'ಮೇಷ್ಟ್ರು ಪರಂಪರೆ'ಯ ದೃಶ್ಯರೂಪದಂತಿರುವ 'ಸ್ಕೂಲ್ ಮಾಸ್ಟರ್' ಚಿತ್ರದಲ್ಲಿ ಬಿ.ಆರ್. ಪಂತುಲು

ಮಟ್ಟದ ಜತೆಜತೆಗೆ ನಮ್ಮಿಂದ ಪೂರ್ತಿ ವಿಭಿನ್ನವಾದ ಆರ್ಥಿಕ ಮಟ್ಟದ, ಸಾಮಾಜಿಕ ಪರಿಸ್ಥಿತಿಯ ಮಕ್ಕಳೊಂದಿಗೆ ಬೆರೆಯುವ, ಅವರನ್ನು ಅರಿಯುವ, ಭಿನ್ನ ಸಂವೇದನೆಗಳನ್ನು ಬೆಳೆಸಿಕೊಳ್ಳುವ ವಿಶಿಷ್ಟ ಅವಕಾಶ ಆ ವಾತಾವರಣ ನಮಗೆ ನೀಡಿತ್ತು. ತೀರಾ ಇತ್ತೀಚಿಗೆ ನಮ್ಮ ಬಾಲ್ಯದ ಗುರುಗಳನ್ನೆಲ್ಲ ಸನ್ಮಾನಿಸುವ ವಿಶಿಷ್ಟ ಸಮಾರಂಭವೊಂದರಲ್ಲಿ ಬಾಲ್ಯದ ಸಹಪಾಠಿಗಳನ್ನು ಸುಮಾರು ಮೂರು ದಶಕದ ನಂತರ ಭೇಟಿಯಾದಾಗ, ಅಲ್ಲಿ ಸಮಾಜದ ಪ್ರಾತಿನಿಧಿಕ ಗುಂಪೊಂದು ನೆರೆದಂತಾಗಿತ್ತು. ದಿನಗೂಲಿ ಕೆಲಸ ಮಾಡುವವರಿಂದ ಹಿಡಿದು ಹೊರ ದೇಶಗಳಲ್ಲಿ ಬದುಕು ಕಂಡುಕೊಂಡವರವರೆಗೆ ವೈವಿಧ್ಯತೆ ಎಂಬುದರ ಮೂರ್ತರೂಪವೇ ಅಲ್ಲಿ ಸೇರಿತ್ತು. ಇಂಥದೊಂದು ಸನ್ನಿವೇಶವನ್ನು ಈಗಿನ ಯಾವೊಂದೂ ಶಾಲೆಗಳ ಹಳೆಯ ವಿದ್ಯಾರ್ಥಿಗಳ ಪುನರ್ಮಿಲನದಲ್ಲಿ ಊಹಿಸುವುದು ಕಷ್ಟ. ಸರ್ಕಾರಿ ಶಾಲೆಗಳೆಂಬವು ಈಗ ಸಮಾಜದ ಕೆಳವರ್ಗದ, ನಿರ್ಗತಿಕರ ಮಕ್ಕಳ ಕಲಿಕಾ ಕೇಂದ್ರಗಳೆಂಬಂತಾಗಿವೆ. ಇನ್ನು ಖಾಸಗಿ ಶಾಲೆಗಳಲ್ಲಿ – ಮಧ್ಯಮ ವರ್ಗದವರ, ಮೇಲ್ವರ್ಗದವರ, ಗಣ್ಯರ, ಇತ್ಯಾದಿಯಾಗಿ ವರ್ಗೀಕರಣಗೊಂಡು ಒಂದು ವರ್ಗ–ವರಮಾನ ಶ್ರೇಣಿಯ ಮಕ್ಕಳು ಇತರರೊಂದಿಗೆ ಸಂಪರ್ಕವನ್ನೇ ಹೊಂದದಂತಾಗಿದೆ.

ಅಂಥದೊಂದು ಸಮ್ಮಿಶ್ರ ವಿದ್ಯಾರ್ಥಿ ಸಮೂಹಕ್ಕೆ ಪಾಠ ಮಾಡುವದು ಆ ಕಾಲದ ನಮ್ಮ ಮಾಸ್ತರುಗಳಿಗೆ ನಿಜಕ್ಕೂ ಸವಾಲಿನ ವಿಷಯವೇ ಆಗಿತ್ತು. ಕೆಲ ವಿದ್ಯಾರ್ಥಿಗಳು ಹೇಳಿದ ಪಾಠವನ್ನು ತಕ್ಷಣವೇ ಅರ್ಥ ಮಾಡಿಕೊಂಡರೆ ಇನ್ನು ಕೆಲವರಿಗೆ ಕಲಿಸಲು ಮಾಸ್ತರುಗಳು ಹರ ಸಾಹಸವನ್ನೇ ಮಾಡಬೇಕಿತ್ತು. ಮನೆಯಲ್ಲಿ ಶಿಕ್ಷಣದ ವಾತಾವರಣವೇ ಇಲ್ಲದವರು, ಇಡೀ ವಂಶದಲ್ಲೇ ಶಾಲೆ ಕಲಿತವರಿಲ್ಲದವರು, ಮನೆಯಲ್ಲಿ ಕೂಲಿಗೆ ಹೋಗಿ ಹಣಗಳಿಸಲು ಇರುವ ಒತ್ತಡ ಮೀರಿ ಇಲ್ಲಿ ಕಲಿಯಬಂದವರು – ಇಂಥ ವೈವಿಧ್ಯಮಯ ಗುಂಪಿಗೆ ಉಪಯೋಗಿಸಬೇಕಾದ ಉಪಾಯಗಳೂ ವೈವಿಧ್ಯಮಯವಾಗಿಯೇ ಇದ್ದವು. ಹೀಗಾಗಿ ಅಂದಿನ ಶಿಕ್ಷಕರು ಮಕ್ಕಳ ತಲೆಯಲ್ಲಿ ಜ್ಞಾನ ತುಂಬಲು ನಿರಂತರ ಹೊಸ ಹೊಸ ವಿಧಾನಗಳ ಅನ್ವೇಷಣೆಯಲ್ಲಿರಬೇಕಿತ್ತು. ಪ್ರತಿಯೊಬ್ಬರದೂ ಪಾಠವಿಧಾನ ಭಿನ್ನವೇ. ಎಷ್ಟು ಜನ ಶಿಕ್ಷಕರೋ ಅಷ್ಟು ವಿಧಾನಗಳು.

ಆದರೆ ಅವರ ನೆರವಿಗೆ ಬರುವಂಥ ಕೆಲ ವಿಷಯಗಳೂ ಆ ಕಾಲದಲ್ಲಿ ಇದ್ದವು. ಮೊದಲನೆಯದಾಗಿ ಆಗ ಮಕ್ಕಳಿಗೆ ಪೆಟ್ಟು ಕೊಡುವುದು ಇತ್ಯಾದಿ ದೈಹಿಕ ಶಿಕ್ಷೆ ಈಗಿನಂತೆ ಕ್ರಿಮಿನಲ್ ಅಪರಾಧವಾಗಿರಲಿಲ್ಲ. ಶಿಕ್ಷಾ ಕ್ರಮಕ್ಕೆ ತಂದೆತಾಯಂದಿರ ಮುಕ್ತ ಸಮ್ಮತಿಯೂ ಇತ್ತು. ತಮ್ಮ ಮಕ್ಕಳು ವಿದ್ಯೆ ಕಲಿತು ಉದ್ಧಾರವಾಗಬೇಕಾದರೆ ಮಾಸ್ತರುಗಳ ಛಡಿಯೇಟು ಅತಿ ಅಗತ್ಯ ಎಂಬುದಾಗಿ ನಂಬಿದ್ದ ತಲೆಮಾರು ಅದು. 'ಛಡಿ ಛಂ ಛಂ, ವಿದ್ಯಾ ಘಂ ಘಂ' ಎಂಬುದು ಆ ಕಾಲದ ಜನಪ್ರಿಯ ಆಡುನುಡಿ. ಕಲಿಸಬೇಕಾದ ವಿಷಯ ಕೂಡ ಇಂದಿನಷ್ಟು ವಿಸ್ತಾರವಾಗಿರಲಿಲ್ಲ. ಓದು ಬರಹ ಮತ್ತು ಲೆಕ್ಕ, ಜೀವನಕ್ಕೆ ಇಷ್ಟಿದ್ದರೆ ಸಾಕು ಎಂಬ ಭಾವನೆಯೇ ಬಹುಪಾಲು ಜನಮಾನಸದಲ್ಲಿತ್ತು. ಅದಕ್ಕಿಂತ ಹೆಚ್ಚಿನ ವಿದ್ಯೆಯ ಅಗತ್ಯವೂ ನಮಗಿಲ್ಲ ಎನ್ನುವವರೂ ಹಲವರಿದ್ದರು. 'ನೋಡ್ರೀ, ನೀವು ಏನೇನೆಲ್ಲಾ ಕಲಿಸಿದ್ರಿ, ಈಗ ಬಾಳೆ ಮಾಡಾಕ ಅದ್ಯಾವುದೂ ಬೇಕಾಗಿಲ್ಲಾ' ಅಂತ ಮಾಸ್ತರರನ್ನು, ಅವರು ಬಯ್ದು ಬಡಿದು ಕಲಿಸಿದ ವಿದ್ಯೆಯನ್ನು, ಗೇಲಿ ಮಾಡುವವರಿಗೂ ಕೊರತೆ ಇರಲಿಲ್ಲ.

ನಮ್ಮ ಕಾಲದ ಇನ್ನೊಂದು ವಿಶೇಷವೆಂದರೆ ಮಾಸ್ತರುಗಳಿಂದ ಜನರ ನಿರೀಕ್ಷೆ ಕೇವಲ ಓದು, ಬರಹಗಳ ಮಟ್ಟಿಗೆ ಸೀಮಿತವಾಗಿರಲಿಲ್ಲ. ಮಾಸ್ತರುಗಳು ತಮ್ಮ ಮಕ್ಕಳ ನಡತೆ, ಗುಣ, ವರ್ತನೆ, ಚಾರಿತ್ರ್ಯ, ಎಲ್ಲವನ್ನೂ ತಿದ್ದಿ ರೂಪಿಸಬೇಕೆಂದು ಬಯಸುತ್ತಿದ್ದರು. ಏಕೆಂದರೆ ಇದ್ದದ್ದು ಒಂದೇ ಸರ್ಕಾರಿ ಶಾಲೆ, ತರಗತಿಗೆ ಅವನೇ ಶಿಕ್ಷಕ. ಹೊರಗಡೆ ಯಾರಾದರೂ ಚಿಕ್ಕ ವಯಸ್ಸಿನವರು ಏನಾದರೂ ತಪ್ಪು ಮಾಡಿದರೆ, ದುರ್ವರ್ತನೆ ತೋರಿದರೆ, ಅಪ್ರಬುದ್ಧವಾಗಿ ವರ್ತಿಸಿದರೆ, ಅವರಿಗೆ ಸಿಗುತ್ತಿದ್ದ ವಾಗ್ದಂಡನೆಯಲ್ಲಿ – 'ಯಾವ ಮಾಸ್ತರ ಸಾಲಿ ಕಲಿಸ್ಯಾನಲೇ' ಎಂಬುದೂ ಒಂದಾಗಿರುತ್ತಿತ್ತು. ಅಂದರೆ ಅವರ ತಪ್ಪಿನ ದೋಷದಲ್ಲಿ ತಂದೆ ತಾಯಿಯರಿಗಿಂತ ಕಲಿಸಿದ ಶಿಕ್ಷಕರಿಗೆ ಸಿಂಹಪಾಲು. ಹಲವು ಸಲ ಈ ವಿಚಾರ ನಮ್ಮ ಮಾಸ್ತರುಗಳನ್ನೂ ಕೆರಳಿಸುತ್ತಿತ್ತು. 'ನಿಮಗಿಷ್ಟೆಲ್ಲಾ ತ್ರಾಸ ತೊಗೊಂಡು ಕಲಿಸಿ, ಹೊರಗ ನೀವು ಮಾಡೂ ಹಲ್ಕಟ್ ಕೆಲಸಕ್ಕೆಲ್ಲಾ ಮಂದಿ ಕಡಿಯಿಂದ ನಾವು ಬೈಸಿಕೋಬೇಕು' ಅಂತ ನಮ್ಮೆದುರು ತರಗತಿಯಲ್ಲಿ ನೊಂದುಕೊಳ್ಳುತ್ತಿದ್ದರು.

ಇಂದಿನಂತೆ ಅಂದೂ ನಮ್ಮ ಸರ್ಕಾರಿ ಶಿಕ್ಷಕರ ಅಧಿಕೃತ ಕಾರ್ಯವ್ಯಾಪ್ತಿ ಶಾಲೆಯ ಆವರಣವನ್ನೂ ದಾಟಿ ಎಲ್ಲ ಕ್ಷೇತ್ರಗಳಲ್ಲೂ ಇರುತ್ತಿತ್ತು. ಮಕ್ಕಳ ಗಣತಿ, ಜನಗಣತಿ, ದನಗಣತಿ, ಚುನಾವಣೆಯಿಂದ ಹಿಡಿದು ನಮ್ಮ ಎಲ್ಲ ಸರ್ಕಾರಗಳ ಅನಿಯಮಿತ ಯೋಜನೆಗಳೆಲ್ಲದರ ಅನುಷ್ಠಾನದ ಜವಾಬ್ದಾರಿ ನಮ್ಮ ಸರಕಾರಿ ಶಿಕ್ಷಕರದ್ದೇ.

ಇಂದು ನಮ್ಮ ಮಕ್ಕಳು ತಂಬಾಕು, ಸಿಗರೇಟುಗಳಂತಹ ಚಟಗಳಿಗೆ ಬಲಿಯಾಗದಂತೆ, ಅವುಗಳ ದಾಸರಾಗದಂತೆ ತಡೆಯಲು ನಾವೇನು ಮಾಡುತ್ತಿದ್ದೇವೆ? 'ಈ ಶಾಲೆ–ಕಾಲೇಜಿನ ಸುತ್ತ 100 ಮೀಟರ್ ಸುತ್ತಳತೆಯಲ್ಲಿ ಯಾವುದೇ ರೀತಿಯ ತಂಬಾಕು ಉತ್ಪನ್ನಗಳನ್ನು ಮಾರುವುದನ್ನು ನಿಷೇಧಿಸಲಾಗಿದೆ' ಅಂತ ದೊಡ್ಡದಾಗಿ ಫಲಕ ಹಾಕಿ ನಮ್ಮ ಜವಾಬ್ದಾರಿಯಿಂದ ಮುಕ್ತರಾಗಿದ್ದೇವೆ. ಆ 100 ಮೀಟರ್ ಖಚಿತಪಡಿಸಿಕೊಳ್ಳಲು ನೀವು ಕೈಯಲ್ಲಿ ಟೇಪ್ ಹಿಡಿದು ನಿಲ್ಲಬೇಕಷ್ಟೆ. ಹೊರಗಡೆಯಿರಲಿ, ತರಗತಿಯಲ್ಲಿಯೇ ಮಕ್ಕಳಿಗೆ ಕಲಿಕೆಯ ರೂಪದಲ್ಲಿ ಪೆಟ್ಟು ಕೊಡುವ ಶಿಕ್ಷಕರನ್ನು ಕಳ್ಳರು, ಸುಲಿಗೆಕೋರರೊಂದಿಗೆ ಸಮೀಕರಿಸಿ ಅವರನ್ನು ಜೈಲಿಗೆ ಕಳಿಸುತ್ತಿದ್ದೇವೆ. ಟೀವಿಗಳಲ್ಲಿ ಅಂಥ ಶಿಕ್ಷಕರ ಜೊತೆಗೆ ಆ ಶಾಲೆಗಳ ಮಾನವನ್ನೂ ಹರಾಜು ಹಾಕುವಂತೆ ದಿನವಿಡೀ ಅದನ್ನು ವೈಭವೀಕರಿಸಿ ಪ್ರಸಾರ ಮಾಡುತ್ತೇವೆ. ನಮ್ಮ ವಿದ್ಯಾರ್ಥಿಗಳು ಎಲ್ಲ ಮೀಟರುಗಳ ಗಡಿ ದಾಟಿ ಹೋಗಿ ತಮ್ಮ ಮೀಟರು ತೋರಿಸುತ್ತಿದ್ದಾರೆ. ಅವರನ್ನು ತಡೆಯುವವರಿಲ್ಲ. ನಮ್ಮ ಸೂಚನಾಫಲಕಗಳ ಅಡಿಯಲ್ಲಿ 'ಇದು ಸುಪ್ರೀಂ ಕೋರ್ಟಿನ ಆದೇಶದ ಅನ್ವಯ' ಅಂತಲೂ ಬರೆಸಿದ್ದೇವೆ. ಅಂದರೆ, ಆ ಮಾತನ್ನು ನಾವಾಗಿಯೇ ಹೇಳುವ ನೈತಿಕ ಧೈರ್ಯ ಕಳೆದುಕೊಂಡಿದ್ದೇವೆ!

ಇಂಥ ಯಾವ ಆದೇಶಗಳ ಅಗತ್ಯವಿಲ್ಲದೆ, ಅದನ್ನೊಂದು ಕರ್ತವ್ಯದಂತೆ ನಿಭಾಯಿಸಿದ, ಅದಕ್ಕಾಗಿ ಬಹುಮಾನ, ಪ್ರಶಂಸೆಗಳ ಹಂಗಿಲ್ಲದೆ, ಕೇವಲ ಭವಿಷ್ಯದ ಜನಾಂಗದ ಬಗೆಗಿನ ಕಳಕಳಿಯಿಂದ, ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ದುಡಿದ ನಮ್ಮ ಕಾಲದ ಎಲ್ಲ ಮಾಸ್ತರುಗಳ ಬಗ್ಗೆ ಪ್ರೀತಿ–ಕೃತಜ್ಞತೆ ಉಕ್ಕಿಬರುತ್ತದೆ, ಅಂಥ ಮಾಸ್ತರುಗಳನ್ನು ಉಳಿಸಿಕೊಳ್ಳಲಾರದ ವ್ಯವಸ್ಥೆಯ ಬಗ್ಗೆ ಮರುಕವೂ ಉಂಟಾಗುತ್ತದೆ.